1245 (1525) : ಶ್ರೀ ಐವಾನ್ ನಿಗ್ಲಿ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನಲ್ಲಿ ವಾಹನಗಳಿಂದಾಗಿ ಅದರಲ್ಲೂ ಮೂರು ಚಕ್ರವುಳ್ಳ ವಾಹನಗಳಿಂದಾಗಿ ಹೆಚ್ಚಿನ ಶಬ್ದ ಮತ್ತು ವಾಯು ಮಾಲಿನ್ಯ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರಿಂದಾಗಿ ಪರಿಸರಕ್ಕುಂಟಾಗುವ ಅಪಾಯವನ್ನು ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮಗಳಾವುವು;

ಇ) ಸಾರ್ವಜನಿಕರು ಮಾಲಿನ್ಯ ಉಂಟು ಮಾಡುತ್ತಿರುವ ವಾಹನಗಳ ಕುರಿತಾಗಿ ಸಂಬಂಧಪಟ್ಟವರಿಗೆ ಮಾಹಿತಿ ನೀಡಲು ಸಹಾಯ ವಾಣಿಯ ಸೌಲಭ್ಯವಿದೆಯೇ;

ಈ) ಈ ರೀತಿಯ ಪರಿಸರ ಮಾಲಿನ್ಯವನ್ನು ನಿಯಂತ್ರಿಸಲು ಸರ್ಕಾರವು ಸಹಾಯವಾಣಿಯ ಆರಂಭಿಸುವುದೇ?

ಶ್ರೀ ಸಿ.ಚೆನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಮೂರು ಚಕ್ರವುಳ್ಳ ವಾಹನಗಳಲ್ಲದೆ, ಎಲ್ಲಾ ರೀತಿಯ ವಾಹನಗಳು ವಾಯು ಮತ್ತು ಶಬ್ದ ಮಾಲಿನ್ಯಕ್ಕೆ ಕಾರಣವಾಗಿರುತ್ತವೆ.

ಆ) ಬೆಂಗಳೂರು ನಗರದ ವಾಯುವಿನ ಗುಣಮಟ್ಟವನ್ನು ಉತ್ತಮಗೊಳಿಸಲು ರಾಜ್ಯ ಸರ್ಕಾರವು 14 ಅಂಶಗಳ ಕಾರ್ಯ ಯೋಜನೆಗಳನ್ನು ರೂಪಿಸಿದೆ. ಸದರಿ ಕಾರ್ಯ ಯೋಜನೆಯು ಆಟೋಗಳಲ್ಲಿ ಪೆಟ್ರೋಲ್ ಬದಲಾಗಿ LPG ಬಳಕೆ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಕಲಬೆರಕೆ ತಡೆಗಟ್ಟುವುದು, ವಾಹನಗಳ ಹೊಗೆಯ ಮಾಪನ, ಪರಿವೇಷ್ಠಕ ವಾಯುವಿನ ಗುಣಮಟ್ಟ ಮಾಪನ ಇತ್ಯಾದಿ ಕ್ರಮಗಳನ್ನು ಒಳಗೊಂಡಿರುತ್ತದೆ. ಈ ಕಾರ್ಯ ಯೋಜನೆಯ ಜಾರಿಯ ಬಗ್ಗೆ ಪರಿಶೀಲಿಸಲು ರಾಜ್ಯ ಸರ್ಕಾರವು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಪಡೆಯನ್ನು ರೂಪಿಸಿರುತ್ತದೆ. ಈ ಕಾರ್ಯಪಡೆಯಲ್ಲಿ ಸಾರಿಗೆ ಇಲಾಖೆ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಆರಕ್ಷಕ ಇಲಾಖೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರತಿನಿಧಿಗಳು ಮತ್ತು ಇತರರು ಸದಸ್ಯರಾಗಿರುತ್ತಾರೆ.

ವಿವಿಧ ಮೋಟಾರ್ ವಾಹನಗಳಿಗೆ, ಉತ್ಪಾದನಾ ಹಂತದಲ್ಲಿ ಮತ್ತು ವಾಹನಗಳ ಬಳಸುವಾಗಿನ ಸಮಯದ ಹೊಗೆ ವಿಸರ್ಜನೆಗೆ ಮೋಟಾರ್ ವಾಹನ ನಿಯಮ, 1989ರಡಿಯಲ್ಲಿ ಮಾನಕಗಳನ್ನು ನಿಗದಿಪಡಿಸಲಾಗಿದೆ. ಆದ್ದರಿಂದ ಮೋಟಾರ್ ವಾಹನಗಳ ನಿಯಮಗಳ ಪ್ರಕಾರ ವಾಹನಗಳ ಹೊಗೆ ನಿಯಂತ್ರಣವು ಸಾರಿಗೆ ಇಲಾಖೆಯ ಕಾರ್ಯ ವ್ಯಾಪ್ತಿಗೆ ಒಳಪಡುತ್ತದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಬೆಂಗಳೂರು ನಗರದ 6 ಕೇಂದ್ರಗಳಲ್ಲಿ ಪರಿವೇಷ್ಠಕ ವಾಯುವಿನ ಗುಣಮಟ್ಟ ಮಾಪನ ಮಾಡುತ್ತಿರುತ್ತದೆ.

ತ್ರಿಚಕ್ರ ವಾಹನಗಳಿಂದ ಉಂಟಾಗುತ್ತಿರುವ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಸರ್ಕಾರವು ಅಧಿಸೂಚನೆ ಹೊರಡಿಸಿ ದಿನಾಂಕ: 01-04-1991 ರಿಂದ ಈವರೆಗೆ ನೋಂದಣಿಯಾಗಿ ಉಪಯೋಗಿಸಲ್ಪಡುತ್ತಿರುವ ಎಲ್ಲಾ ಆಟೋ ರಿಕ್ಷಾಗಳು ಕಡ್ಡಾಯವಾಗಿ ಎಲ್.ಪಿ.ಜಿ ದ್ವಿ-ಇಂಧನ ವ್ಯವಸ್ಥೆಗೆ ಪರಿವರ್ತಿಸಿ ಕೊಳ್ಳುವಂತೆ ಸೂಚಿಸಲಾಗಿರುತ್ತದೆ. ದಿನಾಂಕ: 31-03-2007ರ ಅಂತ್ಯಕ್ಕೆ ಒಟ್ಟು 57069 ಆಟೋ ರಿಕ್ಷಾಗಳು ಎಲ್.ಪಿ.ಜಿ. ದ್ವಿ--ಇಂಧನ ವ್ಯವಸ್ಥೆಗೆ ಪರಿವರ್ತಿಸಿ ಕೊಂಡಿರುತ್ತದೆ.

ವಾಹನಗಳಿಂದಾಗುವ ಶಬ್ದ ಮಾಲಿನ್ಯದ ಕುರಿತಂತೆ, ಪರಿಸರ (ಸಂರಕ್ಷಣೆ) ನಿಯಮಗಳು, 1986ರಲ್ಲಿನ ಷೆಡ್ಯೂಲ್ 6ರ ಭಾಗ-(ಇ) ರಲ್ಲಿ ಮೋಟಾರ್ ವಾಹನಗಳ ಉತ್ಪಾದನಾ ಘಟ್ಟದಲ್ಲಿನ ಶಬ್ದ ಮಾನಕವನ್ನು ನಮೂದಿಸಿದೆ. ಕೇಂದ್ರದ ಮೋಟಾರ್ ವಾಹನಗಳ ನಿಯಮಗಳು, 1989ರ ನಿಯಮ 120 ರಲ್ಲಿರುವಂತೆ, ಮೇಲೆ ತಿಳಿಸಿರುವ ಮಾನಕಗಳನ್ನು ನಿರ್ವಹಿಸಬೇಕಿರುತ್ತದೆ. ಮೂರು ಚಕ್ರದ ವಾಹನಗಳಿಗೆ ದಿನಾಂಕ: 1-4-2005ರಿಂದ ಅನ್ವಯಿಸುವಂತೆ ನಿಗಧಿ ಪಡಿಸಿರುವ ಮಿತಿಗಳು ಈ ಕೆಳಕಂಡಂತಿವೆ:

ಕ್ರಮ ಸಂಖ್ಯೆ	ಮೂರು ಚಕ್ರದ ವಾಹನಗಳು	ಶಬ್ದದ ಮಿತಿ dB(A) ಗಳಲ್ಲಿ
1	Displacement upto 175 cc	77
2	Displacement more than 175 cc	80

ಬೆಂಗಳೂರು ನಗರದಲ್ಲಿ O.E. filled ಎಲ್.ಪಿ.ಜಿ. ವ್ಯವಸ್ಥೆ ಹೊಂದಿರುವ ತ್ರಿಚಕ್ರ ವಾಹನಗಳನ್ನು ಮಾತ್ರವೇ ನೋಂದಾಯಿಸಲಾಗುತ್ತಿದೆ. ಇಲಾಖೆಯು ನಿಯಮಿತವಾಗಿ ಹೆಚ್ಚು ಹೊಗೆ ಹೊರಸೂಸುವ ತ್ರಿಚಕ್ರ ವಾಹನಗಳನ್ನು ವಾಯು ಮಾಲಿನ್ಯ ಹಾಗೂ ಶಬ್ದ ಮಾಲಿನ್ಯಕ್ಕಾಗಿ ತಪಾಸಣೆ ನಡೆಸಲಾಗುತ್ತಿದೆ.

ಇ) ಈಗಾಗಲೇ ಸಾರಿಗೆ ಆಯುಕ್ತರು ಕಛೇರಿಯಲ್ಲಿ ಸಹಾಯವಾಣಿ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಇದರ ದೂರವಾಣಿ ಸಂಖ್ಯೆ:22352434 ಆಗಿರುತ್ತದೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ ವಿವಿಧ ರೀತಿಯ ದೂರುಗಳನ್ನು ಸಲ್ಲಿಸಲು ಈ ಸಹಾಯವಾಣಿ ಸಂಪರ್ಕವನ್ನು ಬಳಸಿಕೊಳ್ಳುತ್ತಿದ್ದಾರೆ.

ಈ) ಸಹಾಯವಾಣಿಯನ್ನು ಈಗಾಗಲೇ ಜಾರಿಗೆ ತಂದಿದೆ.

1247 (1521) ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮುಲ್ಕಿ ಉಪ ನೋಂದಣಿ ಕಛೇರಿ ವ್ಯಾಪ್ತಿಗೆ ಉಡುಪಿ ಜಿಲ್ಲೆಯ ಕಂದಾಯ ಗ್ರಾಮಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಗ್ರಾಮಗಳನ್ನು ಮುಲ್ಕಿ ಉಪ ನೋಂದಾವಣಿ ಕಛೇರಿ ವ್ಯಾಪ್ತಿಯಿಂದ ಹೊರತುಪಡಿಸಿ ಉಡುಪಿ ಉಪ ನೋಂದಣಿ ಕಛೇರಿ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ಕಾಪು ಹೋಬಳಿ ವ್ಯಾಪ್ತಿಗೆ ಪ್ರತ್ಯೇಕವಾದ ಉಪ ನೋಂದಾವಣಿ ಕಛೇರಿ ಮಂಜೂರಾತಿ ನೀಡಲಾಗುವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು

ಆ) ಹೌದು

ಇ) ಉಡುಪಿ ತಾಲ್ಲೂಕು ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾಗುತ್ತಿರುವ 3 ವರ್ಷಗಳ ವಾರ್ಷಿಕ ಸರಾಸರಿ ದಸ್ತಾವೇಜುಗಳ ಸಂಖ್ಯೆ 6310 ಅವುಗಳಲ್ಲಿ ಕಾಪು ವ್ಯಾಪ್ತಿಗೆ ಬರುವ ಗ್ರಾಮಗಳಿಗೆ ಸಂಬಂಧಿಸಿದಂತೆ ನೋಂದಣಿಯಾಗಿರುವ 3 ವರ್ಷಗಳ ವಾರ್ಷಿಕ ಸರಾಸರಿ